ಅ) ಚಿಕ್ಕಮಗಳೂರು ಜಿಲ್ಲೆ ಮಳಲೂರು ಏತ ನೀರಾವರಿ ಯೋಜನೆಗೆ ಮಂಜೂರಾತಿ ದೊರೆತಿದ್ದು ಯಾವಾಗ;

ಆ) ಇದು ಕಾರ್ಯಾರಂಭ ಮಾಡಿದ್ದು ಯಾವಾಗ ಹಾಗೂ ಕಾಮಗಾರಿ ಈಗ ಯಾವ ಹಂತದಲ್ಲಿದೆ;

ಇ) ಇದಕ್ಕಾಗಿ ತೆಗೆದಿರಿಸಿರುವ ಹಣ ಎಷ್ಟು;

ಈ) ಈಗಾಗಲೇ ಎಷ್ಟು ಹಣ ಖರ್ಚು ಮಾಡಲಾಗಿದೆ;

ಉ) ಇಂಧನ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿದೆ ಹಾಗೂ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯ ಬೇಕಾಗಬಹುದು;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ದಿನಾಂಕ: 10.12.1997

ಆ) ಈ ಕಾಮಗಾರಿಯನ್ನು 1999–20004ರಲ್ಲಿ ಪ್ರಾರಂಭಿಸಲಾಗಿದೆ. ಇನ್‌ಟೇಕ್ ವ್ಯವಸ್ಥೆ. ರಿಡ್ಜ್ ಸಿಸ್ಟರ್ನ್ ಕೆಲಸಗಳು ಪೂರ್ಣಗೊಂಡಿದೆ. ಜಾಕ್‌ವೆಲ್ ಕಂ ಪಂಪಿನ ಮನೆ ಹಾಗೂ ಕಾವಲುಗಾರನ ಮನೆ ನಿರ್ಮಾಣ ಭಾಗಶಃ ಮುಗಿದಿರುತ್ತದೆ. ಮೊದಲನೇ ಹಂತದ ರೈಸಿಂಗ್ ಮೈನ್ ಅನ್ನು ಅಳವಡಿಸುವ ಕಾಮಗಾರಿಯ ಒಟ್ಟು 1500 ಮೀ. ಉದ್ದಕ್ಕೆ ಕೊಳವೆಗಳನ್ನು ಅಳವಡಿಸಲಾಗಿದೆ.

ಇ) ರೂ. 36.09 ಲಕ್ಷಗಳು.

ಈ) ರೂ. 36.09 ಲಕ್ಷಗಳು.

ಉ) ಈ ಯೋಜನೆಯ ಮೊದಲ ಹಂತದ ರೈಸಿಂಗ್ ಮೈನ್ ಕಾಮಗಾರಿಯನ್ನು ಮೆ:ರೂಪಾ ಇಂಜಿನಿಯರಿಂಗ್ ಕಾರ್ಪೋರೇಷನ್, ಮಂಗಳೂರು ಮತ್ತು ಮೊದಲನೇ ಹಂತದ ಇತರೆ ಸಿವಿಲ್ ಕೆಲಸಗಳನ್ನು ಶ್ರೀ ಕೆ. ಮೊಹಮದ್, ಗುತ್ತಿಗೆದಾರರು, ವಸ್ತಾರೆ ಇವರಿಗೆ ವಹಿಸಲಾಗಿದೆ. ಆದಷ್ಟು ಬೇಗನೆ ಪೂರ್ಣಗೊಳಿಸಲಾಗುವುದು.

....

145 (322) : ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಯಥೇಚ್ಛವಾಗಿ ದೊರಕುವ ವಿವಿಧ ರೀತಿಯ ಗಣಿ ಅದಿರು (ಮ್ಯಾಂಗನಿಸ್, ಕಬ್ಬಿಣ, ಇತರೆ) ತೆಗೆದು ಅದನ್ನು ಶಿವಮೊಗ್ಗ, ಚಿಕ್ಕಮಗಳೂರು ಹಾಸನ, ಜಿಲ್ಲೆಗಳ ಆಯ್ದ ಕೆಲವು ಒಳರಸ್ತೆಗಳ ಮೂಲಕ ಮಂಗಳೂರು ಬಂದರಿಗೆ ಲಾರಿಗಳಲ್ಲಿ ಸಾಗಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ಒಳ ರಸ್ತೆಗಳಲ್ಲಿ ಲಾರಿಗಳು ಸಂಚರಿಸುತ್ತಿವೆ;

ಇ) ಸದರಿ ರಸ್ತೆಗಳು ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿವೆಯೇ;

ಈ) ಈ ರಸ್ತೆಗಳಲ್ಲಿ ಲಾರಿಗಳು ಸಂಚರಿಸಲು ಸರ್ಕಾರದ ಅನುಮತಿ ಪಡೆಯಲಾಗಿದೆಯೇ;

ಉ) ಅವರಿಗೆ ಸಾಗಾಣಿಕೆಗೆ ಅನುಮತಿ ನೀಡಿರುವ ರಸ್ತೆ ಮಾರ್ಗಗಳು ಯಾವುವು;

ಊ) ಅನುಮತಿ ನೀಡಿದ ರಸ್ತೆಯನ್ನು ಬಿಟ್ಟು ಅಕ್ರಮವಾಗಿ ಒಳನುಸುಳಿ ಹತ್ತಿರದ ಮಾರ್ಗದ ರಸ್ತೆಗಳನ್ನು ಬಳಸಲು ಕಾರಣಗಳೇನು;

ಋ) ಸದರಿ ರಸ್ತೆಗಳು ಗಣಿ ಅದಿರು ಸಾಗಿಸುವ ಸಾಮರ್ಥ್ಯ ಹೊರುವ ಶಕ್ತಿ ಇಲ್ಲದಿರುವುದು ನಿಜವೇ; ಈ ಅಕ್ರಮ ರಸ್ತೆ ಸಾಗಾಣಿಕೆ ಮಾಡುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಋೂ) ಇದರಿಂದಾಗಿ ಈ ಎಲ್ಲಾ ಒಳಮಾರ್ಗದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ, ದುರಸ್ತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿರುತ್ತದೆ.

ಆ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ರಸ್ತೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. (ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು)

ಇ) ಹೌದು

ಈ) ಮತ್ತು ಉ)

ಯಾವುದೇ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಲಾರಿಗಳು ಸಂಚರಿಸಲು ಸರ್ಕಾರದ ಅನುಮತಿ ಪಡೆಯುವ ಪದ್ಧತಿ ಜಾರಿಯಲ್ಲಿ ಇರುವುದಿಲ್ಲ. ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯ ಪರಿವ್ಯಾಪ್ತಿಯಲ್ಲಿನ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 2 ಅಕ್ಸ್‌ಲ್‌ನ 10 ಟನ್ ಮತ್ತು 4 ಅಕ್ಸ್‌ಲ್‌ನ 15 ಟನ್ ಭಾರದ ವಾಹನಗಳು ಮತ್ತು ರಾಜ್ಯ ಹೆದ್ದಾರಿಗಳಲ್ಲಿ 2 ಅಕ್ಸ್‌ಲ್‌ನ 12 ಟನ್ ಮತ್ತು 4 ಅಕ್ಸ್‌ಲ್‌ನ 20 ಟನ್ ಭಾರದ ವಾಹನಗಳು ಸಂಚರಿಸಬಹುದಾಗಿದೆ. ಇದಕ್ಕಿಂತ ಹೆಚ್ಚಿನ ಭಾರದ ವಾಹನಗಳ ಸಂಚಾರವನ್ನು ನಿಯಂತ್ರಿಸಲು ಹಾಗೂ ನಿರ್ಬಂಧಿಸಲು ಸಾರಿಗೆ ಇಲಾಖೆ ಮತ್ತು ಪೋಲೀಸ್ ಇಲಾಖೆಗಳನ್ನು ಕೋರಲಾಗಿದೆ.

ಋೂ) ಇದರಿಂದಾಗಿ ಈ ಎಲ್ಲಾ ಒಳಮಾರ್ಗದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ, ದುರಸ್ತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿರುತ್ತದೆ.

ಆ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ರಸ್ತೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. (ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು)

ಇ) ಹೌದು

ಈ) ಯಾವುದೇ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಲಾರಿಗಳು ಸಂಚರಿಸಲು ಸರ್ಕಾರದ ಅನುಮತಿ ಪಡೆಯುವ ಪದ್ಧತಿ ಜಾರಿಯಲ್ಲಿ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯ ಪರಿವ್ಯಾಪ್ತಿಯಲ್ಲಿನ ಜಿಲ್ಲಾ ಮುಖ್ಯ

ರಸ್ತೆಗಳಲ್ಲಿ 2 ಅಕ್ಸ್‌ಲ್‌ಗೆ 10 ಟನ್ ಮತ್ತು 5 ಅಕ್ಸ್‌ಲ್‌ನ 15 ಟನ್ ಭಾರದ ವಾಹನಗಳು ಮತ್ತು ರಾಜ್ಯ ಹೆದ್ದಾರಿಗಳಲ್ಲಿ 2 ಅಕ್ಸಲ್‌ನ 12 ಟನ್ ಮತ್ತು 4 ಅಕ್ಸ್‌ಲ್‌ನ 20 ಟನ್ ಭಾರದ ವಾಹನಗಳು ಸಂಚರಿಸಬಹುದಾಗಿದೆ. ಇದಕ್ಕಿಂತ ಹೆಚ್ಚಿನ ಭಾರದ ವಾಹನಗಳ ಸಂಚಾರವನ್ನು ನಿಯಂತ್ರಿಸಲು ಹಾಗೂ ನಿರ್ಬಂಧಿಸಲು ಸಾರಿಗೆ ಇಲಾಖೆ ಮತ್ತು ಪೋಲೀಸ್ ಇಲಾಖೆಗಳನ್ನು ಕೋರಲಾಗಿದೆ.

ಖೂ) ಗಮನಕ್ಕೆ ಬಂದಿದೆ.

ಎ) ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಸದರಿ ರಸ್ತೆಗಳ ದುರಸ್ತಿಯನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅನುಬಂಧ

ವಿವಿಧ ರೀತಿಯ ಗಣಿ ಅದಿರುಗಳನ್ನು ಸಾಗಿಸಲಾಗುತ್ತಿರುವ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ರಸ್ತೆಗಳ ವಿವರ: (ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 322)

ಶಿವಮೊಗ್ಗ ಜಿಲ್ಲೆ :

1. ಹೊನ್ನಾಳಿ ಬೈಂದೂರು ರಾಜ್ಯ ಹೆದ್ದಾರಿ

ಚಿಕ್ಕಮಗಳೂರು ಜಿಲ್ಲೆ

1. ತರೀಕೆರೆ ಹೊಸದುರ್ಗ ರಾಜ್ಯ ಹೆದ್ದಾರಿ
2. ಕಡೂರು ಮಂಗಳೂರು ರಾಜ್ಯ ಹೆದ್ದಾರಿ
3. ಬಿಳಿಕೆರೆ ತರೀಕೆರೆ ರಾಜ್ಯ ಹೆದ್ದಾರಿ
4. ಅಜ್ಜಂಪುರ ಬುಕ್ಕಾಂಬುದಿ ಜಿಲ್ಲಾ ಮುಖ್ಯ ರಸ್ತೆ
5. ಬೀರೂರು ಅಜ್ಜಂಪುರ ಜಿಲ್ಲಾ ಮುಖ್ಯ ರಸ್ತೆ
6. ಬಿ.ಬಿ. ಹಿಲ್ ಜಿಲ್ಲಾ ಮುಖ್ಯ ರಸ್ತೆ

ಹಾಸನ ಜಿಲ್ಲೆ:

1. ತಿಪಟೂರು ದುದ್ದ ಹಾಸನ ರಾಜ್ಯ ಹೆದ್ದಾರಿ
2. ಚಿಕ್ಕಬಳ್ಳಾಪುರ ಮೂಡಿಗೆರೆ ರಾಜ್ಯ ಹೆದ್ದಾರಿ
3. ಶ್ರೀರಂಗಪಟ್ಟಣ ಅರಸೀಕೆರೆ ರಾಜ್ಯ ಹೆದ್ದಾರಿ
4. ಹುಳಿಯೂರು ಕೇರಳಾಪುರ ರಾಜ್ಯ ಹೆದ್ದಾರಿ
5. ಬೆಂಡೆಕೆರೆ ಗುರುಡನಗಿರಿ ರಸ್ತೆ (ಭಾಗಶಃ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯರಸ್ತೆ)
6. ಬಾಗೇ ಬೇಲೂರು ಜಿಲ್ಲಾ ಮುಖ್ಯ ರಸ್ತೆ
7. ಅರೇಪಳ್ಳಿ ಬಿಕ್ಕೋಡು ಜಿಲ್ಲಾ ಮುಖ್ಯ ರಸ್ತೆ
8. ತಿಪಟೂರು ಚನ್ನರಾಯಪಟ್ಟಣ ಜಿಲ್ಲಾ ಮುಖ್ಯ ರಸ್ತೆ
9. ನುಗ್ಗೇಹಳ್ಳಿ ಮಟ್ಟನವಿಲೆ ಕೆ.ಆರ್. ಪೇಟೆ ಜಿಲ್ಲಾ ಮುಖ್ಯ ರಸ್ತೆ
10. ಹೊಳೇನರಸೀಪುರ ದಿಡಗ ದಬ್ಬೇಘಟ್ಟ ಜಿಲ್ಲಾ ಮುಖ್ಯ ರಸ್ತೆ
11. ಗಂಡಸಿ ಸಂತೇಮೈದಾನ ನೊಣವಿನಕೆರೆ ಜಿಲ್ಲಾ ಮುಖ್ಯ ರಸ್ತೆ
12. ಬೀಚೇನಹಳ್ಳಿ ಕಾರೇಕೆರೆ ತಿಪಟೂರು ಜಿಲ್ಲಾ ಮುಖ್ಯ ರಸ್ತೆ
13. ಸಕಲೇಶಪುರ ಅರೇಪಳ್ಳಿ ಬೀಕನಹಳ್ಳಿ ಜಿಲ್ಲಾ ಮುಖ್ಯ ರಸ್ತೆ

ಚಿತ್ರದುರ್ಗ ಜಿಲ್ಲೆ:

1. ಹುಳಿಯಾರು ಅನಗೋಡು ರಾಜ್ಯ ಹೆದ್ದಾರಿ
2. ತರೀಕೆರೆ ಹೊಸದುರ್ಗ ವಿ.ವಿ.ಪುರ ಹಿರಿಯೂರು ಧರ್ಮಪುರ ರಾಜ್ಯ ಹೆದ್ದಾರಿ
3. ಕುಮಟಾ ಕಡಮಡಗಿ ರಾಜ್ಯ ಹೆದ್ದಾರಿ
4. ಹಾಗಲಕೆರೆ ಬೆಳಗೂರು ಮರವಂಚಿ ಜಿಲ್ಲಾ ಮುಖ್ಯ ರಸ್ತೆ
5. ಬೆಳಗೂರು ಶ್ರೀರಾಂಪುರ ಜಿಲ್ಲಾ ಮುಖ್ಯ ರಸ್ತೆ
6. ಸಿರಿಗೆರೆ ಸಾಸಲು ಜಿಲ್ಲಾ ಮುಖ್ಯ ರಸ್ತೆ

ಮಂಗಳೂರು ಜಿಲ್ಲೆ:

1. ಕಡೂರು ಬಂಟ್ವಾಳ ರಾಜ್ಯ ಹೆದ್ದಾರಿ

ಉಡುಪಿ ಜಿಲ್ಲೆ

1. ಆಗುಂಬೆ ಮಲ್ಪೆ ರಾಜ್ಯ ಹೆದ್ದಾರಿ
2. ಬ್ರಹ್ಮಾವರ ಜನ್ನಾಡಿ ಜಿಲ್ಲಾ ಮುಖ್ಯ ರಸ್ತೆ
3. ಸಾಪ ಸಿದ್ದಾಪುರ ಜಿಲ್ಲಾ ಮುಖ್ಯ ರಸ್ತೆ

ಬಳ್ಳಾರಿ

1. ಎಕ್ಕುಂಬಿ ಮೊಳಕಾಲ್ಮೂರು ರಾಜ್ಯ ಹೆದ್ದಾರಿ
2. ಹೊಸಪೇಟೆ ಮಂಗಳೂರು ರಾಜ್ಯ ಹೆದ್ದಾರಿ
3. ಮೈಲಾರ ತೋರಣಗಲ್ಲು ರಾಜ್ಯ ಹೆದ್ದಾರಿ
4. ಅರಭಾವಿ ಚಳ್ಳಕೆರೆ ರಾಜ್ಯ ಹೆದ್ದಾರಿ
5. ಮಂಡ್ಯ ಹಡಗಲಿ ರಾಜ್ಯ ಹೆದ್ದಾರಿ
6. ಸಂಡೂರು ಹೊಸಪೇಟೆ ರಾಜ್ಯ ಹೆದ್ದಾರಿ
7. ತೋರಣಗಲ್ಲು ರೈಲ್ವೆ ಫೀಡರ್ ಜಿಲ್ಲಾ ಮುಖ್ಯ ರಸ್ತೆ
8. ಸಂಡೂರು ನವಲತ್ತಿ ಜಿಲ್ಲಾ ಮುಖ್ಯ ರಸ್ತೆ
9. ಬನ್ನಿಹಟ್ಟಿ ರಾಜಾಪುರ ಮೆಟ್ರಿಕಿ ಜಿಲ್ಲಾ ಮುಖ್ಯ ರಸ್ತೆ
10. ಬೆಳಗಲ್ಲು ತುಮಟಿ ಜಿಲ್ಲಾ ಮುಖ್ಯ ರಸ್ತೆ
11. ಬಳ್ಳಾರಿ ಬೆಳಗಲ್ಲ ಹರಗಿನಡೋಣಿ ಜಿಲ್ಲಾ ಮುಖ್ಯ ರಸ್ತೆ
12. ಇಟ್ಟಗಿ ಮೈದೂರು ಜಿಲ್ಲಾ ಮುಖ್ಯ ರಸ್ತೆ

....

146 (317) : ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ನಿರಾಶ್ರಿತರಿಗೆ ನೀಡಿದ ಪರಿಹಾರದಂತೆ ಗುಲ್ಬರ್ಗಾ ಜಿಲ್ಲೆಯ ಕೆಲವು ಭಾಗಗಳ ಬೆಣ್ಣೆತೋರಾ ಗಂಡೋರಿ ನಾಲಾ ಯೋಜನೆಗಳ ಸಂತ್ರಸ್ತ ಕುಟುಂಬಗಳನ್ನು ಗುರುತಿಸಿ ಪರಿಹಾರ ನೀಡಲಾಗಿದೆಯೇ; ಹಾಗೂ ಪರಿಹಾರಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು;

ಆ) ಸರ್ಕಾರ ಈ ನಿರಾಶ್ರಿತರಿಗೆ ಪರಿಹಾರದ ಜೊತೆಗೆ ವಸತಿ ಸೌಕರ್ಯ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆಯೇ;